ಭೂಪ! 'ನಾನಿಲ್ಲಿ ಹುಡುಗಿಯೊಬ್ಬಳನ್ನು ಇಷ್ಟಪಟ್ಟಿದ್ದೇನೆ. ಮೂಲತಃ ಹಿಮಾಚಲ ಪ್ರದೇಶದವಳು. ಅವಳ ತಂದೆ, ತಾಯಿ ಕೂಡ ಇಲ್ಲೇ ಇದ್ದಾರೆ. ದಯವಿಟ್ಟು ಕ್ಷಮಿಸಿ. ಮುಂದಿನ ಶುಕ್ರವಾರವೇ ಮದುವೆ. ಮದುವೆ ಅಂದರೆ ರಿಜಿಸ್ಟರ್ಡ್ ಮದುವೆ, ಅಪ್ಪ! ಇಷ್ಟು ದೂರ ನೀವು ಬರುವುದು ಕಷ್ಟ. ಹೇಗೂ ಹದಿನೈದು ದಿನಗಳೊಳಗೆ ಮನೆಗೆ ಬರಲಿದ್ದೇನೆ. ಎಲ್ಲರನ್ನೂ ಕರೆದು ಮನೆಯಲ್ಲೇ ರಿಸೆಪ್ಷನ್ ಇಟ್ಟುಕೊಂಡರಾಯಿತು. ರಿಸೆಪ್ಷನ್ ಚೆನ್ನಾಗಿ ಮಾಡೋಣ. ಬೇಸರ ಪಡಬೇಡಿ, ಅಪ್ಪ! ಎಲ್ಲ ವಿಷಯವನ್ನು ಅಲ್ಲಿ ಬಂದಾಗ ತಿಳಿಸುತ್ತೇನೆ.' ಆಹಾ! ಬುದ್ಧಿವಂತ! ಪರಿಸ್ಥಿತಿಯನ್ನು ಫೋನಿನಲ್ಲೇ ಅದೆಷ್ಟು ಜಾಣತನದಿಂದ ನಿಭಾಯಿಸಿದ ನನ್ನ ಮಗ! ನೀನು ಹೋಗಿದ್ದು ಒಳ್ಳೆಯದೇ ಆಯ್ತು, ಲಕ್ಷ್ಮಿ!

★★★

ಪೋರ್ಟಿಕೋದಲ್ಲಿ ಕಾರನ್ನು ಬಿಟ್ಟವನೇ ವರಾಂಡಾದ ಸೋಫಾದ ಮೇಲೆ ಊರಿ ಕಾಲುಗಳನ್ನು ಸಡಿಲವಾಗಿ ಇಳಿಬಿಟ್ಟು ಕೈಗಳನ್ನು ಹಿಂದಕ್ಕೆಕ್ಕಿ ಬೆರಳುಗಳನ್ನು ಹೆಣೆದು ತಲೆಗೆ ಆಧಾರವೋ ಎಂಬ ಹಾಗೆ ಇಟ್ಟು ಕಣ್ಣು ಮುಚ್ಚಿ ಕುಳಿತುಬಿಟ್ಟ. ಹತ್ತು ನಿಮಿಷ ಮೊದಲು ಮನೆಯನ್ನು ಪ್ರವೇಶಿಸಿದ್ದ ಅಲಕಾಗೆ ಆಶ್ಚರ್ಯ. **'What's the matter, Sateesh? You look tired. Anything wrong?'** ಮುಚ್ಚಿದ ಕಣ್ಣುಗಳನ್ನು ತೆರೆಯದೆ **'It is all over, Honey!'** ಎನ್ನುತ್ತ ದೀರ್ಘವಾಗಿ ಉಸಿರುಬಿಟ್ಟ. ಆತಂಕಗೊಂಡ ಅಲಕಾ ಸೋಫಾದ ಹತ್ತಿರ ಬಂದು ಆತನ ಪಕ್ಕದಲ್ಲಿ ಕೂತು ಆತನ ಭುಜ ಸವರಿ ಮತ್ತೆ 'ಏನಾಯ್ತು, ಹೇಳು, ಸತೀಶ್!' ಎಂದಳು.

'ಇವತ್ತು ನನ್ನ ಟೇಬಲ್ ಮೇಲೆ **Yellow slip** ಇತ್ತು, ಅಲಕಾ!'

ಅಲಕಾಗೆ ಶಾಕ್! 'ಯಾಕೆ? ಯಾಕಂತೆ?' ಅಲಕಾ ಉತ್ಕಂಠಿತಳಾಗಿದ್ದಳು. ಆತ ಮುಚ್ಚಿದ ಕಂಗಳು ಮುಚ್ಚಿಕೊಂಡೇ ಇದ್ದವು.

'ಯಾಕೆ ಅಂತ ಏನು ಹೇಳೋದು? ನನಗೆ ಹೇಳಿ ಮಾಡ್ತಾರಾ ಅವ್ರು? ಇಷ್ಟವಿಲ್ಲದಿದ್ರೆ ಸ್ಯಾಕ್ ಮಾಡ್ತಾರಷ್ಟೆ.'

'ಅದೇ ನಾನು ಕೇಳೋದು. ಯಾಕೆ ಇಷ್ಟವಿಲ್ಲ? ನೀವೇನೋ ತಪ್ಪು ಮಾಡಿರ್ಬೇಕು.'

ಸತೀಶನಿಗೆ ರೇಗಿಹೋಯಿತು. ಕಣ್ಬಿಟ್ಟು ಒದರಿದ: 'ಬಾಯಿಗೆ ಬಂದ ಹಾಗೆ ಏನೇನೋ ಹೇಳ್ಬೇಡ, ಅಲಕಾ! ಮೊದಲೇ ನನ್ನ ತಲೆ ಕೆಟ್ಟಿದೆ. ಕಾರಣ ನನಗೆ ಗೊತ್ತಿಲ್ಲ. ಕೇಳೋಕೆ ಹೊರಟ್ರೆ ಅವ್ರು ಏನು ಹೇಳಬಹುದು ಅಂತ ನಿಂಗೆ ಗೊತ್ತಿಲ್ವಾ? ನಿಮ್ಮ ಸರ್ವೀಸ್ ನಮಗೆ ಬೇಕಿಲ್ಲ ಅಂತಾರಷ್ಟೆ.' ಹೀಗೆಂದವನೇ ಎದ್ದು ಬೆಡ್‌ರೂಮ್‌ನತ್ತ ನಡೆದ. 'ಛೇ! ಇದೀಗ ತಾನೇ ಕಾಲೂರ್ತಿದ್ವಿ. ಮುಂದೆ ಹೇಗೋ' ಎಂದು ಗೊಣಗುತ್ತ ಅಡುಗೆಮನೆಯತ್ತ ಸಾಗಿದಳು ಅಲಕಾ. ಎರಡು ಕಪ್ ಕಾಫಿ ಮಾಡಿ ಬೆಡ್ರೂಮಿನಲ್ಲಿ ಮಲಗಿದ್ದ ಗಂಡನಿಗೊಂದು ಕೊಟ್ಟು ಇನ್ನೊಂದನ್ನು ತಾನು ತೆಗೆದುಕೊಂಡಳು. ಇಬ್ಬರೂ ಮೌನವಾಗಿ ಕಾಫಿ ಕುಡಿದರು. ಪುಟ್ಟ ಸರಯೂ ಕಾರ್ಟೂನ್ ಲೋಕದಲ್ಲಿ ಮುಳುಗಿದ್ದಳು. ಆರು ಗಂಟೆಗೆ ಮಗ ತೇಜ ಬರುವ ಸಮಯ. ಮೌನವಾಗಿ ಹೊರಬಂದು ಅಲಕಾ ಮಗ ಬರುವುದನ್ನೇ ಕಾಯುತ್ತ ಕುಳಿತಳು. ಸತೀಶ ಬೆಳಿಗ್ಗೆ ಎದ್ದು ಕಾರು ತೆಗೆದುಕೊಂಡು ಹೊರನಡೆದ. ಅಲಕಾ ಮಕ್ಕಳನ್ನು ಸ್ಕೂಲಿಗೆ ಕಳುಹಿಸಿ ತಾನು ಕೆಲಸ ಮಾಡುತ್ತಿದ್ದ ಸ್ಟೋರ್‌ಹೌಸ್‌ಗೆ ತೆರಳಿದಳು. ಆ ಒಂದು ವಾರ ಸತೀಶನ ದಿನಚರಿ ಪುನರಾವರ್ತನೆಯಾಗುತ್ತಲೇ ಇತ್ತು. ಪ್ರತಿ ದಿನ ಸಂಜೆ ಮನೆಯಲ್ಲಿ ನೀರವ ಮೌನ. ಸಂಜೆ ಸತೀಶ ತೀರಾ ಖಿನ್ನನಾಗಿರುತ್ತಿದ್ದ.

ತೇಜನಿಗೆ ಅಚ್ಚರಿ; ಕೇಳುತ್ತಾನೆ: **'Mummy! What's wrong with Papa? He doesn't**